160

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 18, ಸ॥ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 17ನೇ ಮಾರ್ಚೀ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಪ್ರೂಪ್ ಅರ್ಜೀಗಳು ಸಪ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜ್ಜೀದಾರರಹೆಸರು		ಪ್ರತಿವಾದಿಗಳ ಹೆಸರು		ಹಿಯರಿಂಗ್ ತಾರೀಖು.
ಸ್ಪೆ. ಅ. ೧೩	ರುದ್ರಪ್ಪ	..	ಸ್ವಾಮಿರಾವ್	..	೨೩ನೇ ಮಾರ್ಚೀ
ಸ್ಪೆ. ಅ. ೧೪	ದೊಡ್ಡಮ್ಮ ಹೆಗ್ಗಡತ್ತಿ	..	ಲಕ್ಷ್ಮೀ ನಾರಣಭಟ್ಟ	..	ಡಿಟೋ
ಸ್ಪೆ. ಅ. ೧೫	ಫರೀವಿ ಖಾ	..	ಖಾಂಖಾ	..	ಡಿಟೋ
ಪಿಟೀಷ್	ಗುಂಡಪ್ಪ	..	..	..	ಡಿಟೋ
ಡಿಟೋ	ಚಿಕ್ಕ ತಿಂಮೈಯ	..	..	..	ಡಿಟೋ
ಡಿಟೋ	ಮೆ॥ ವ್ಯಾನಿಂಗ್	..	..	..	ಡಿಟೋ
ಸ್ಪೆ. ಅ. ೯	ಶೇಷಭಟ್ಟ	..	ಕೃಷ್ಣಪ್ಪ ವಗೈರೇ	..	೩೦ನೇ ಡಿಟೋ
ಸ್ಪೆ. ಅ. ೧೬	ವೀರಭದ್ರೈಯ	..	ರಂಗಶೆಟ್ಟ	..	ಡಿಟೋ

ತಾರೀಖು 1ನೇ ಫಿಬ್ರವರೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರಿಲ್ ಗುರ್ತೀ ಲಾಗಾಯತು ಮೇ.ಆಖೈರ್ ವರಿವಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು, ಅಥವಾ ಹೆಡ್‌ರೈಟರ್ ಪ್ರತಿಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಗೆ ಅಂದರೆ:—

(a) ಕಕ್ಷಿಗಾರ್ರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗೈರೇ ಬಗ್ಗೆ ಅರ್ಜೀಗಳನ್ನು, ತೆಗದುಕ್ಕೊಳ್ಳಲಿಕ್ಕೂ;

(b) ಸಾದರಾತೀ ಬಗ್ಗೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆಬಗ್ಯೆ ಕಮ್ಮಿಷನರವರ ಕೋರ್ಟ್‌ನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸ್ಟೈಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ;

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರ್ರು ಶಿರಸ್ತೇದಾರ್‌ರಿಂದ ಮಾಮೂಲ್ ಮೇರೆ ಡಿಮಾಂಡ್ ಜಿಪಿ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಮೈಸೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು ಸ್ರ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಜೈಲ್ ಸೂಪ್ರಿಂಟೆಂಡೆಂಟರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 6ನೇ ಮಾರ್ಚೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರಿಲ್ ಗುರ್ತೀ ಲಾಗಾಯತು ಮೇ ಆಖೈರ್ ವರಿವಿಗೆ ಎರಡು ತಿಂಗಳು ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು ಪ್ರತಿ ಸೋಮವಾರ ವ ಬೃಹಸ್ಪತಿವಾರ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ:—

(a) ಕಕ್ಷಿಗಾರ್ರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಮತ್ತು ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕ್ಕೊಳ್ಳಲಿಕ್ಕೂ;

(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆ ಬಗ್ಯೆ ಕಮ್ಮಿಷನರವರ ಕೋರ್ಟ್‌ನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸ್ಟೈಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರ್ರು, ಶಿರಸ್ತೇದಾರ್‌ರಿಂದ ಮಾಮೂಲ್ ಮೇರೆ ಡಿಮಾಂಡ್ ಜಿಪಿ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯಂಬದಾಗಿ ದಸ್ತಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಕಡೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು, ಸ್ರ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಸಿವಿಲ್ ಜೈಲ್ ಕೀಪರ್‌ಯವರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 8ನೇ ಮಾರ್ಚೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು 1876ನೇ ಇಸವಿ ಏಪ್ರಿಲ್ ಗುರ್ತೀ ಲಾಗಾಯತು ಮೇ ಆಖ್ಯೆರ್ ವರವಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರು ಅಥವಾ ಹೆಡ್ ಕ್ಲರ್ಕ್ ಪ್ರತಿಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಗೆ ಅಂದರೆ:—

(a) ಕಕ್ಷಿಗಾರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮುಲ್ಜಾರೀ ವಗೈರೇ ಬಗ್ಗೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ,

(b) ಸಾದರಾತೀ ಬಗ್ಗೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀ ತರತಕ್ಕ ಬಗ್ಗೆ,

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆ ಬಗ್ಗೆ ಕಮ್ಮಿಷನರವರ ಕೋರ್ಟಿನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಗೆ; ಮತ್ತು

(d) ಕಕ್ಷಿಗಾರು ಕೇಳಿಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸ್ಟೈಲ್ ಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರು ಶಿರಸ್ತೇದಾರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಖತ್ ಮಾಡತಕ್ಕದ್ದು.

4. ಕೋರ್ಟು ಹುಕುಮಿನಿಂದ ಹಾಸನ ಡಿಸ್ಟ್ರಿಕ್ಟ್ ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಗೆ ಅಪೇಕ್ಷಿಸುವ ಕಕ್ಷಿಗಾರು ಸಕ್ 1859ನೇ ಇಸವಿ 8ನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಹಾಸನ ಡಿಸ್ಟ್ರಿಕ್ಟ್ ಸಿವಿಲ್ ಜೈಲ್ ಕೀಪರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 16ನೇ ಮಾರ್ಚೀ 1876.

ಸರ್ಕ್ಯುಲರ್ ಹುಕ್ಕುಂನಂಬರ್ 17.

ಕೆಲವು ಮೇಜಸ್ಟ್ರೇಟರುಗಳು, ಮುಖ್ಯವಾಗಿ ತಾಲ್ಲೂಕು ಮೇಜಸ್ಟ್ರೇಟರುಗಳು, ಅನೇಕ ಜನಗಳಿಗೆ ಒಂದು ಪ್ರೊಸೆಸ್ ಕೊಡುವ ಪದ್ಧತಿ ಅನುಸರಿಸಿರುತ್ತಾರೆಂತಲೂ, ಆಗಾಗ್ಯೆ ಒಂದು ಸಮ್ಮನ್ನಲ್ಲಿ 9 ಜನಗಳ ವರಿಗೂ ದಾಖಲ್ಮಾಡುತ್ತಾರೆಂತಲೂ, ಜಾಹೀರಾತಿಗೆ ಬಂದಿರುತ್ತೆ.

2. ಯಿದು ಅಕ್ರಮ ಪ್ರತಿಸಮ್ಮನ್ಸಿಗೆ 2 ಪ್ರತಿ ಮೇರಿಗೂ, ಮತ್ತು ಆಕ್ಟಿನ 2ನೇ ಷೆಡ್ಯೂಲ್‌ನಲ್ಲಿ ಕೊಡಲ್ಪಟ್ಟಿರುವ A. ನ ಮೂನೆ ಮೇರಿಗೂ, ಕೊಡಲ್ಪಡತಕ್ಕದ್ದೆಂದು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 152ನೇ ಸೆಕ್ಷನ್ ವಿಶೆಯಿಂದ ಕಂಡೋಕ್ತವಾಗಿ ವಿಧಿಸಲ್ಪಟ್ಟಿರುತ್ತೆ.

ನಮೂನೆ ಪ್ರಕಾರ ಸಮ್ಮನ್ನಲ್ಲಿ ಒಬ್ಬನ ಹೆಸರು ಮಾತ್ರವೇ ದಾಖಲ್ಮಾಡಲ್ಪಡತಕ್ಕದ್ದಾಗಿರುತ್ತೆ. ಈ ಕ್ರಮವನ್ನು ಐಇಂದಾ ಖಂಡಿತವಾಗಿ ಆಚರಿಸತಕ್ಕದ್ದು.

H. T. PRINSEP,
Offg. Judl. Commr.

ಸರ್ವೇ ವ.ತ್ತು ಸೆಟಲ್‌ಮೆಂಟ್ ಇಲಾಖಾ.

ತಾರೀಖು 13ನೇ ಮಾರ್ಚೀ 1876. ನಂ. 216.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ಕೊರ್ಟ್‌ಗೆರೆ ತಾಲ್ಲೂಕು ಸರ್ವೇ ಸೆಟಲ್‌ಮೆಂಟ್ ಸೈನಲಾತಿಯು, 1876ನೇ ಇಸವಿ ಮಾರ್ಚೀ 15ನೇ ತಾರೀಖು ಪುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

J. P. GRANT, *Major*,
Supt., Rev. Survey & Assessment,
Mysore.